ಪಟ್ಟಣದಲ್ಲಿಯ ಕೋಳಿ

ಪಟ್ಟಣದಲ್ಲಿಯ ಕೋಳಿ

ಲೇ: ಆರ್ಥರ್ ಡೋರೋಸ್
ಚಿತ್ರ: ಹೆನ್ರಿ ಕೋಲ್
ಕನ್ನಡಕ್ಕೆ: ಪ್ರಭಾಕರ ನಾನಾವಟಿ

ಹೆನ್ರಿ ಒಂದು ಚಿಕ್ಕ ಕೋಳಿ. ಅದರ ಪೂರ್ಣ ಹೆಸರು ಹೆನ್ರಿಟ್ಟಾ. ಆದರೆ ಪ್ರೀತಿಯಿಂದ ಎಲ್ಲರು ಅದಕ್ಕೆ ಹೆನ್ರಿ ಎಂದೇ ಕರೆಯುತ್ತಿದ್ದರು. ಅದು ಪಟ್ಟಣದಲ್ಲಿಯ ಕೋಳಿಗೂಡಿನಲ್ಲಿ ಇರುತ್ತಿತ್ತು. ಈ ಗೂಡು ಅಲೆಕ್ಸ್ ನ ಮನೆಯ ಹಿತ್ತಲಲ್ಲಿ ಇತ್ತು.

ಅಲೆಕ್ಸ್ ದಿನಾಲು ಹೆನ್ರಿಗೆ ಭೆಟ್ಟಿಯಾಗಲು ಹೋಗುತ್ತಿದ್ದನು. ಹೆನ್ರಿಯ ಆರೈಕೆ ಮಾಡುತ್ತಿದ್ದನು. ಅದರ ಮೊಟ್ಟೆಗಳನ್ನು ಒಂದುಗೂಡಿಸುತ್ತಿದ್ದನು. ಹೆನ್ರಿಯ ಮೊಟ್ಟೆಗಳೆಲ್ಲ ನೀಲಿ ಬಣ್ಣದ್ದಾಗಿದ್ದವು.

“ ಇದೊಂದು ಆಶ್ಚರ್ಯವೇ," ಅಲೆಕ್ಸ್ ಒಟಗುಟ್ಟಿದನು.

“ಇದೂ ಬಹು ಆಶ್ಚರ್ಯದ ಸಂಗತಿ," ಲೂಸಿ ಹೇಳಿತು. ಲೂಸಿ ಅಲೆಕ್ಸ್ ನ ಮನೆ ಬದಿ ಇರುತ್ತಿದ್ದ ಬೆಕ್ಕು .

“ನೀನೆಂತಹ ಕೋಳಿ, ಇಂತಹ ನೀಲಿ ಮೊಟ್ಟೆಗಳನ್ನು ಕೊಡುತ್ತೀ?“ ಲೂಸಿ ಕೇಳಿತು.
“ನಾನು ಇಲ್ಲಿ ಇರುತ್ತೇನೆ. ಕೋಳಿಗಳು ಮೊಟ್ಟೆ ಕೊಡುತ್ತವೆ. ನನ್ನ ಮೊಟ್ಟೆಯ ಬಣ್ಣ ನೀಲಿ ಅಷ್ಟೇ“ ಸ್ವಲ್ಪ ಸಿಟ್ಟಿನಿಂದಲೇ ಕೋಳಿ ಹೇಳಿತು.
“ನಿನಗೆ ಸಿಟ್ಟು ಬಂದ ಹಾಗಿದೆ," ಲೂಸಿ ಹೇಳಿತು.
“ಕೋಳಿಗಳು ಕೂಡ ಸಿಟ್ಟಿಗೇಳುತ್ತವೆ," ಹೆನ್ರಿ ಗಟ್ಟಿಯಾಗಿ ನುಡಿಯಿತು.

“ಸರಿ.. ಆದರೆ ಕೋಳಿಗಳು ಹಳ್ಳಿಯಲ್ಲಿರುತ್ತವೆ. ಅಲ್ಲಿ ಗದ್ದಲವಿರುವದಿಲ್ಲ," ಲೂಸಿ ಹೇಳಿತು. " ಹಳ್ಳಿಯಲ್ಲಿ ಆಕಳುಗಳು ಕೂಡ ಇರುತ್ತವೆ... .."

“ಆಕಳು ಎಂದರೆ ಏನು ?" ಹೆನ್ರಿ ಕೇಳಿತು.

“ಆಕಳು ಹಳ್ಳಿಯಲ್ಲಿ ಇರುತ್ತದೆ. ಹುಲ್ಲನ್ನು ತಿನ್ನುತ್ತದೆ. ಹಾಲು ಕೊಡುತ್ತದೆ. ಇದೆಲ್ಲ ನೀನು ಹಳ್ಳಿಗೆ ಹೋಗಿ ನೋಡಬೇಕು."

ಅಲೆಕ್ಸ್ ನು ತಂದ ಪಿಝ್ಝಾ, ಸ್ಟ್ರಾಬೆರಿ, ಕಲಂಗಡಿ, ರೊಟ್ಟಿ ಎಲ್ಲ ತಿಂಡಿಗಳನ್ನು ಹೆನ್ರಿ ತಿಂದು ಮುಗಿಸಿತು. "ಏನಿದು, ಕುದುರೆಯ ಹಾಗೆ ತಿನ್ನುತ್ತಿರುವಿ ," ಲೂಸಿ ಕೆಣಕಿತು.

“ನಾನು ಕೋಳಿಯ ಹಾಗೆನೇ ತಿನ್ನುತ್ತೇನೆ. ... ಕುದುರೆ ಎಂದರೇನು ?“ ಹೆನ್ರಿ ಕೇಳಿತು.

“ಕುದುರೆಗಳು ಊರಲ್ಲಿ ಇರುತ್ತವೆ. ಅವು ಬಹಳ ದೊಡ್ಡ ಪ್ರಾಣಿಗಳು. ಬೂದು ಬಣ್ಣದವು. ಮನುಷ್ಯರು ಅವುಗಳ ಮೇಲೆ ಜಿಗಿದು ಕೂಡುತ್ತಾರೆ. ಇದೆಲ್ಲ ನಿನಗೆ ಹಳ್ಳಿಯಲ್ಲಿ ನೋಡಲು ಸಿಗುವದು.“ ಲೂಸಿ ಬಡಬಡಿಸಿತು.

ಹೆನ್ರಿ ಹಿತ್ತಲಲ್ಲಿ ಹುಳಗಳನ್ನು ಹುಡುಕಿ ತಿನ್ನುತ್ತಲಿತ್ತು. ಹಿತ್ತಲಲ್ಲಿ ಹುಲ್ಲು, ಕಲ್ಲು ಮತ್ತು ಹೊಲಸು ಅಲ್ಲಲ್ಲಿ ಕಾಣುತ್ತಿದ್ದವು.

“ಏನಿದು. ಹಂದಿಯಂತೆ ಎಲ್ಲೆಡೆ ಹೊಲಸು ಮಾಡುತ್ತಿರುವಿ," ಲೂಸಿ ಹೇಳಿತು.

“ಹಂದಿ ಎಂದರೆ ಏನು?" ಹೆನ್ರಿ ಕೇಳಿತು.

“ಹಂದಿಗಳು ಹಳ್ಳಿಯಲ್ಲಿ ಇರುತ್ತವೆ.ಅವುಗಳ ಮೂಗು ಯಾವಾಗಲೂ ಹೊಲಸಿನಿಂದ ತುಂಬಿರುತ್ತದೆ. ಹಂದಿಯನ್ನು ನೀನು ಒಮ್ಮೆ ನೋಡಲೇ ಬೇಕು.“ ಲೂಸಿ ಹೇಳಿತು.

“ಸಾಕಿನ್ನು, ಸಾಕಷ್ಟು ಕೇಳಿಯಾಯಿತು. ನಾನೇ ಹಳ್ಳಿಗೆ ಹೋಗಿ ನೋಡುತ್ತೇನೆ,” ಎಂದೆನ್ನುತ್ತ ತನ್ನ ಗೂಡಿನ ಚಪ್ಪರದ ಮೇಲೆ ಏರಿ ಹಳ್ಳಿಯ ದಿಕ್ಕಿಗೆ ಹಾರಿ ಹೋಯಿತು.

ಹೆನ್ರಿಗೆ ಬಹಳ ದೂರ ಹಾರಿ ಹೋಗಲು ಶಕ್ಯವಾಗಲಿಲ್ಲ. ಸ್ವಲ್ಪ ದೂರ ಹಾರಿದ ಮೇಲೆ ದಣಿವು ಆರಿಸಲೆಂದು ಪಟ್ಟಣದ ಮಧ್ಯದಲ್ಲಿರುವ ಕಲ್ಲಿನ ಪುತ್ಥಳಿಯ ಮೇಲೆ ಕುಳಿತುಕೊಂಡಿತು. ಅದರ ಮೇಲೆ ಸಾಕಷ್ಟು ಪಾರಿವಾಳಗಳು ಕುಳಿತಿದ್ದವು. ಅವುಗಳ ಚಟ್ಟುಗಳಿಂದಾಗಿ ಪುತ್ಥಳಿಗೆ ಬಿಳಿ ಬಣ್ಣ ಕೊಟ್ಟಂತೆ ಕಾಣುತ್ತಿತ್ತು.

"ನಿನ್ನಂತಹ ವಿಚಿತ್ರ ಹಕ್ಕಿಯನ್ನು ನಾವು ಮೊದಲು ಸಲ ನೋಡುತ್ತೇವೆ." ಪಾರಿವಾಳ ಮಾತಾಡಿಸಿತು.

" ನಾನು ಒಂದು ಕೋಳಿ. ಹಳ್ಳಿಗೆ ಹೋಗುತ್ತಿರುವೆ."ಹೆನ್ರಿ ಉತ್ತರಿಸಿತು.

"ಯಾವ ರೀತಿಯಲ್ಲಿ ನೀನು ಹಾರುತ್ತಿರುವೆಯೋ ಆ ಲೆಕ್ಕದಿಂದ ನೋಡಿದರೆ ನೀನು ಬಸ್ಸಿನಲ್ಲಿ ಕುಳಿತು ಹೋಗುವದೇ ಸರಿ," ಪಾರಿವಾಳ ಹೇಳತೊಡಗಿತು. "ಬಸ್ಸು ಅಲ್ಲಿ ನಿಲ್ಲುತ್ತದೆ."

"ಥ್ಯಾಂಕ್ಸ," ಹೆನ್ರಿ ಹೇಳಿತು.

"ಇದರ ಅಗತ್ಯವಿಲ್ಲ," ಪಾರಿವಾಳ .

"ನಾನು ಮೊದಲೇ ಹೇಳಿದ್ದೇನೆ," ಹೆನ್ರಿಯ ಉತ್ತರ.

ಬಸ್ಸು ನಿಂತ ಕ್ಷಣ ಕೋಳಿ ಪುಟ್ಟನೆ ಜಿಗಿದು ಒಳಹೋಯಿತು. ಬಸ್ಸಿನ ಚಾಲಕನು “ಚಿಲ್ಲರೆ ಕೊಡು” ಎಂದು ಹೇಳಿದನು.

“ನನ್ನ ಹತ್ತಿ ರ ದುಡ್ಡು ಇಲ್ಲ.” ಎಂದು ಹೇಳುತ್ತ ತನ್ನ ರೆಕ್ಕೆ ಮೇಲಿನ ಒಂದು ಗರಿಯನ್ನು ಹೆನ್ರಿ ಕೊಟ್ಟಿತು.

"ಇದೆಂತಹ ಹಕ್ಕಿ?" ಬಸ್ಸಿನಲ್ಲಿ ಮಗ್ಗುಲಲ್ಲಿ ಕುಳಿತ ನಾಯಿ ಬೊಗಳುತ್ತ ಕೇಳಿತು.
“ಕೋಳಿ.” ಹೆನ್ರಿ ಹೇಳಿತು.
“ನಾನಲ್ಲ.” ನಾಯಿ ಬೊಗಳಿತು.
“ನಾನು ಕೋಳಿ.” ಹೆನ್ರಿ ಸಿಟ್ಟಿನಲ್ಲಿ ಹೇಳಿತು.

ಬಸ್ಸು ಹಳ್ಳಿಯ ಹತ್ತಿರದ ದಾರಿಯಲ್ಲಿ ನಿಂತಿತು.
“ಕೇಳಿಲ್ಲಿ ಕೋಳಿ, ಹಳ್ಳಿಗೆ ಹೋಗಲಿಕ್ಕೆ ದಾರಿಯನ್ನು ದಾಟಬೇಕು.” ನಾಯಿ ಎಚ್ಚರಿಕೆ ಕೊಟ್ಟಿತು.
ಹೆನ್ರಿ ಜಿಗಿದಾಡುತ್ತ ಹಳ್ಳಿಯ ದಾರಿ ಹಿಡಿಯಿತು .

ಮುಂದೆ ಹೋಗುವ ದಾರಿ ಕಾಣದ್ದರಿಂದ ಹೆನ್ರಿ ಸಮೀಪದ ಒಂದು ಚಿಕ್ಕ ದಿನ್ನೆಯ ಮೇಲೆ ಕುಳಿತುಕೊಂಡಿತು.

“ನೀನು ಎಲ್ಲಿ ಹೋಗುತ್ತಿರುವಿ?” ಅಲ್ಲಿಯೇ ಇದ್ದ ಒಂದು ಇರುವೆ ಕೇಳಿತು. “ನಾನು ಹಳ್ಳಿಗೆ ಹೋಗುವೆ.” ಹೆನ್ರಿ ಹೇಳಿತು. “ನನ್ನ ಚಿಕ್ಕಪ್ಪ-ಚಿಕ್ಕಮ್ಮ ಅಲ್ಲಿ ಇರುತ್ತಾರೆ. ಅಲ್ಲಿ ಸಾಕಷ್ಟು ಇರುವೆಗಳು ಇವೆ. ಮತ್ತು ಸಾಕಷ್ಟು ಕೋಳಿಗಳು ಕೂಡ!” ಇರುವೆ ಹೇಳತೊಡಗಿತು.

“ಹಳ್ಳಿ ಎಲ್ಲಿದೆ?” ಹೆನ್ರಿ ಕೇಳಿತು. “ಎಲ್ಲಿ ಪಟ್ಟಣವಿಲ್ಲವೋ ಅದೆಲ್ಲ ಹಳ್ಳಿಯೇ.”. ಇರುವೆ ಹೇಳಿತು. “ಇಲ್ಲಿ ನೋಡು. ಈ ಟ್ರಕ್ಕು ನಿನ್ನನ್ನು ಹಳ್ಳಿಗೆ ಒಯ್ಯಬಹುದು. ಅಲ್ಲಿ ನಿನಗೆ ತಿಂಡಿ ಕೂಡ ದೊರೆಯಬಹುದು.” ಹೆನ್ರಿ ಮತ್ತು ಇರುವೆ ಟ್ರಕ್ಕಿನಲ್ಲಿ ಕುಳಿತವು. ಟ್ರಕ್ಕಿನಲ್ಲಿಯ ತಿಂಡಿ ತಿಪ್ಪೆಯಲ್ಲಿ ಒಗೆದ ಹೊಲಸು ನಾತದ್ದಾಗಿತ್ತು

“ನಾವು ಬಂದು ಮುಟ್ಟಿದೆವು.” ಟ್ರಕ್ಕು ನಿಂತ ಮೇಲೆ ಇರುವೆ ಹೇಳಿತು. “ನನಗೆ ಅನ್ನಿಸಿದ್ದಕ್ಕಿಂತ ಈ ಹಳ್ಳಿ ದೊಡ್ಡದಾಗಿದೆ. “ಹೆನ್ರಿ ಹೇಳಿತು. ಟ್ರಕ್ಕಿನಿಂದ ಇರುವೆ ಮತ್ತು ಹೆನ್ರಿ ಜಿಗಿದು ಹೊಲದ ಹತ್ತಿರ ಹೋದವು.

“ಹಿನ್ ನ್ ನ್ ನ್ ....” ಹುಲ್ಲು ತಿನ್ನುತ್ತಿರುವ ದೊಡ್ಡ ಗಾತ್ರದ ಪ್ರಾಣಿ ಸಪ್ಪಳ ಮಾಡತೊಡಗಿತು.

ಹುಲ್ಲು ಆಕಳು ತಿನ್ನುತ್ತದೆ ಎಂಬುದು ಅದಕ್ಕೆ ನೆನಪಾಯಿತು. “ಇದೆಂತಹ ಸೋಜಿಗದ ಆಕಳು!” ವಿಸ್ಮಯಚಕಿತವಾದ ಕೋಳಿ ಒಟಗುಟ್ಟಿತು.



ಬಯಲಲ್ಲಿ ದೊಡ್ಡ ದೊಡ್ಡ ಪ್ರಾಣಿಗಳು ಮೇಯುತ್ತಿದ್ದನ್ನು ಹೆನ್ರಿ ನೋಡಿತು. ಅದಕ್ಕೆ "ಬೂದಿ ಬಣ್ಣದ ಪ್ರಾಣಿಗಳು ಕುದುರೆಗಳು." ಎಂಬುದು ನೆನಪಿಗೆ ಬಂದಿತು. "ಇವು ಹಂದಿಗಳಿರಬೇಕು. ಈ ಕೆಸರಿನಲ್ಲಿ ಏನು ಮಾಡುತ್ತವೆ?" ಹೆನ್ರಿ ಕೇಳಿತು. ಮತ್ತೇ ತನ್ನಷ್ಟಕ್ಕೆ ತಾನೇ "ಕೆಸರಿನಲ್ಲಿಯ ಜಳಕ ಒಳ್ಳೆಯದು." ಎಂದು ಗೊಣಗುತ್ತ ಹೆನ್ರಿ ಕೂಡ ಕೆಸರಿನಲ್ಲಿ ಸ್ನಾನ ಮಾಡಿತು. ಮತ್ತು ಅಲ್ಲಿಂದ ಜಿಗಿದಾಡುತ್ತ ಮುಂದೆ ಹೋಗತೊಡಗಿತು...

ಅಷ್ಟರಲ್ಲಿ ಮಳೆ ಬರತೊಡಗಿತು. ಒಂದು ದೊಡ್ಡ ಕಟ್ಟಡ ಕಂಡಿತು. ಆ ಕಟ್ಟಡದಿಂದ ಹೆನ್ರಿಗೆ “ಪಕ್.. ಪಕ್... ಪಕಾಕ್...” ಎಂಬ ದನಿ ಕೇಳಿಸಿತು. ಹೆನ್ರಿ ಬಾಗಿಲನ್ನು ದೂಡಿ ಕಟ್ಟಡದ ಒಳಗೆ ಹೊಕ್ಕಿತು.

ಈ ಕಟ್ಟಡದ ಬಾಗಿಲು ಹೆನ್ರಿಯ ಗೂಡಿನ ಬಾಗಿಲಿನಂತಿರಲಿಲ್ಲ. ಕೇವಲ ಹೆನ್ರಿ ಒಳ-ಹೊರಗೆ ಹೋಗುವಷ್ಟೇ ಗೂಡಿನ ಬಾಗಿಲನ್ನು ಅಲೆಕ್ಸ್ ಮಾಡಿದ್ದನು. ಇಲ್ಲಿ ಮಾತ್ರ ವಿಶಾಲವಾಗಿರುವ ಬಾಗಿಲು ತೆರೆದಾಗ ಬಸ್ಸು ಕೂಡ ಒಳಹೋಗಬಹುದು. ಬಾಗಿಲು ತೆರೆದಾಗ ಒಳಗಿನಿಂದ ಫಟ್ ಫಟ್ ಎಂಬ ಸಪ್ಪಳ ಬರತೊಡಗಿತು.

ಕಟ್ಟಡದ ಒಳಗೆ ಝುಗ್ಗೆಂದು ಬೆಳಕು ಉರಿಯುತ್ತಿತ್ತು.
ಗೋಡೆಯ ಮೇಲೆ ನೂರಾರು ಚಿಕ್ಕ ಪೆಟ್ಟಿಗೆ ಆಕಾರದ
ಸಂದಿಗಳಿದ್ದವು. ಅವುಗಳಲ್ಲಿ ಕೋಳಿಗಳು ವಿಶ್ರಮಿಸಿದ್ದವು.



ಇಲ್ಲಿಯ ಪ್ರತಿಯೊಂದು ಕೋಳಿಗಾಗಿ
ಚಿಕ್ಕ ಗೂಡು ಇತ್ತು.
"ನಾನು ಕೋಳಿಗಳೇ ಇದ್ದ ಪಟ್ಟಣಕ್ಕೆ
ಬಂದ ಹಾಗೆ ಅನ್ನಿಸುತ್ತದೆ." ಹೆನ್ರಿ
ತನ್ನಷ್ಟಕ್ಕೆ ತಾನೇ ಅಂದುಕೊಂಡಿತು.

ಹೆನ್ರಿ ಒಂದು ಬರಿದಾದ ಗೂಡಿನಲ್ಲಿ
ಹೊಕ್ಕಿತು.
“ಕೇಳಿಲ್ಲಿ, ನಾನು ಹೆನ್ರಿ. ನೀನು ಯಾರು?”
ಹೆನ್ರಿ ಕೇಳಿತು.
“ಬಾತುಕೋಳಿ.” ಮಗ್ಗುಲದ ಕೋಳಿ
ಹೇಳಿತು.
“ನೀನು ಕೂಡ ಕೋಳಿ ಎಂದು ನನಗೆ
ಅನ್ನಿಸಿತು.” ಹೆನ್ರಿ ಉತ್ತರ ಕೊಟ್ಟಿತು.

ಸ್ವಯಂಚಲಿತ ಮಶೀನುಗಳೆಲ್ಲ ತಿರುಗುತ್ತಿದ್ದವು. ಗೀಅರಗಳ,
ಚೇನುಗಳ ಸಪ್ಪಳ ಕೇಳುತ್ತಿತ್ತು. “ನೋಡಲ್ಲಿ ಬಾತುಕೋಳಿ,
ನಿನ್ನ ಮೈಮೇಲೆಲ್ಲ ಕಾಳುಗಳು ಬೀಳುತ್ತಲಿವೆ.” ಕೋಳಿ
ಎಚ್ಚರಿಸಿತು.
ಸುರಿಮಳೆಯಂತೆ ಕಾಳುಗಳು ಎಲ್ಲೆಡೆ ಹಾಸಿಗೆ ಹಾಕಿದಂತೆ
ಬೀಳುತ್ತಲಿದ್ದವು.

ಆ ಕೋಳಿಯ ಮೇಲೆ ಯಾರೋ ಕಾಳುಗಳನ್ನು ಸುರಿಯುತ್ತಿದ್ದಾರೆಂದು ಹೆನ್ರಿಗೆ ಅನ್ನಿಸಿತು.
“ಕೇಳಿಲ್ಲಿ,” ಹೆನ್ರಿ ಕಟ್ಟಡದಲ್ಲಿಯ ಇನ್ನೊಂದು ಕೋಳಿಯನ್ನು ಕರೆಯಿತು.
“ಪಕಾಕ್..ಪಕ್..ಪಕ್.. ನಾವೀಗ ಬಹಳ ಕೆಲಸದಲ್ಲಿದ್ದೇವೆ.” ಎರಡನೆ ಕೋಳಿ ಮೆಲ್ಲ ದನಿಯಲ್ಲಿ ಹೇಳಿತು.

ಅವೆಲ್ಲ ಮೊಟ್ಟೆ ಇಡುವ ಕೆಲಸ ಮಾಡುತ್ತಿದ್ದವು. ಬಿಳಿ ಬಣ್ಣದ, ಕಂದು ಬಣ್ಣದ ಮೊಟ್ಟೆಗಳು ಪಟ್ಟಿಯ ಮೇಲೆ ಸಾಲಾಗಿ ಒಂದರ ಹಿಂದೆ ಒಂದರಂತೆ ಬರುತ್ತಿದ್ದವು.

ಒಂದು ನೀಲಿ ಬಣ್ಣದ ಮೊಟ್ಟೆ ಕೂಡ ಅದರಲ್ಲಿತ್ತು. ಅದು ಮಾತ್ರ ಹೆನ್ರಿಯದು. ಈ ಪಟ್ಟಿ ಮೊಟ್ಟೆಗಳನ್ನೆಲ್ಲ ದೂರ ಒಯ್ಯುತ್ತಿತ್ತು. ಹೆನ್ರಿಗೆ ಏನು ನಡೆದಿದೆ ಎಂಬುದು ತಿಳಿಯತೊಡಗಿತು.

“ಈ ಜಾಗ ನನ್ನ ಸಲುವಾಗಿ ಸರಿಯಿಲ್ಲ.” ಹೆನ್ರಿ ನಿಶ್ಚಯಿಸಿತು.



ಮೊಟ್ಟೆಗಳು ತುಂಬಿದ ಪೆಟ್ಟಿಗೆಯ ಮುಚ್ಚಳಿಕೆಯಲ್ಲಿ ಹೆನ್ರಿ ಸಿಕ್ಕಿಕೊಳ್ಳಬಹುದಾಗಿತ್ತು. ಸ್ವಲ್ಪದರಲ್ಲಿ ತಪ್ಪಿಸಿಕೊಂಡಿತು. ಯಾರೋ ಒಬ್ಬ ಮನುಷ್ಯನ ದನಿ ಕೇಳಿಸಿತು. “ಈ ಪೆಟ್ಟಿಗೆ ತುಂಬಿದೆ. ಪಟ್ಟಣಕ್ಕೆ ಮುಟ್ಟಿಸಿ. “

“ನನಗೂ ಪಟ್ಟಣಕ್ಕೆ ಹೋಗಲೇ ಬೇಕು.” ಹೆನ್ರಿ ಯೋಚಿಸಿತು.

ಹೆನ್ರಿ ಟ್ರಕ್ಕಿನ ಒಳಗೆ ಜಿಗಿದು ಯಾರಿಗೂ ಕಾಣದಂತೆ ಪೆಟ್ಟಿಗೆಗಳ ಹಿಂದೆ ಅಡಗಿ ಕುಳಿತಿತು.

ಹಳ್ಳಿಯಿಂದ ಪಟ್ಟಣ ಬಹಳ ದೂರವಿತ್ತು. ಟ್ರಕ್ಕು ನಿಂತ ಮೇಲೆ ಹೆನ್ರಿ ರೆಕ್ಕೆಗಳನ್ನು ಹಾರಿಸುತ್ತ ಕೆಳಗಿಳಿಯಿತು. ರೆಕ್ಕೆಯನ್ನು ಸರಿಪಡಿಸಿ ತನ್ನ ಗೂಡಿನ ದಾರಿ ಹಿಡಿಯಿತು.
ಕೋಳಿ ತಿರುಗಿ ಬಂದಿತು. ಅಲೆಕ್ಸ್ ಸಂತೋಷದಿಂದ ಕೂಗಿದನು.
ಮೊಟ್ಟೆಗಳು ಕೂಡ ಬಂದವು.
ಮೊದಲು ಕೋಳಿ ಆಮೇಲೆ ಮೊಟ್ಟೆ- ಹೆನ್ರಿ ಹೇಳಿತು.

“ನಿನ್ನ ಕಲ್ಪನೆಯಲ್ಲಿದ್ದಂತೇಯೆ ಹಳ್ಳಿ ಇತ್ತಲ್ಲವೆ?” ಲೂಸಿ ಕೇಳಿತು.
“ಅದು ಬಹಳ ಬೇರೆ ಇತ್ತು. ಆದರೆ ಆ ಜಾಗ ನನಗಾಗಿ ಅಲ್ಲ.” ಹೆನ್ರಿ ಹೇಳಿತು.

ನನಗೆ ಇನ್ನೊಂದು ಜಾಗದ ಬಗ್ಗೆ ಗೊತ್ತಿದೆ. ಆಕಾಶಯಾನದಲ್ಲಿ ಗಗನಗಾಮಿಗಳ ಜತೆ ಮೊದಲನೆ ಸಲ ಕೋಳಿ ಹೋಗುತ್ತಲಿದೆ." ಲೂಸಿ ಹೇಳಿತು.

"ಗಗನಗಾಮಿ ಎಂದರೆ ಏನು?" ಹೆನ್ರಿ ಕೇಳಿತು.

"ಗಗನಗಾಮಿಗಳು ಸ್ಪೇಸ ಸೂಟನ್ನು ಧರಿಸಿ ರಾಕೆಟ್ಟುಗಳ ಮೇಲೆ ಕುಳಿತು ಅಂತರಿಕ್ಷದಲ್ಲಿರುವ ಗ್ರಹಗಳನ್ನು ಶೋಧಿಸುತ್ತಾರೆ. ಅಲ್ಲಿ..."ಲೂಸಿ ಹೇಳತೊಡಗಿತು.

"ಅಂತರಿಕ್ಷ ಒಂದು ಬೇರೆ ಜಗತ್ತು ಇರಬೇಕು. ನಾನೇ ಸ್ವತಃ ಹೋಗಿ ನೋಡಬೇಕು." ಹೆನ್ರಿ ಹೇಳಿತು.



ಸಮಾಪ್ತ